ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 92-97.
©*IIMRD*, Mysuru.

IIMRD JOURNALS
www.iimrd.com

# ಡುಂಗ್ರಿ ಗರಾಸಿಯ ಬುಡಕಟ್ಟು ಸಮುದಾಯದ ಧಾರ್ಮಿಕ ಆಚರಣೆಗಳು

**ಶಿವಲಿಂಗಪ್ಪ. ಎ.ಎನ್.* ಮತ್ತು ಡಾ.ಬಿ.ಆರ್.ವಿಜಯೇಂದ್ರ****

**ಸಂಶೋಧಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.

**ಮಾರ್ಗದರ್ಶಕರು, ಆರ್ಥೋಪಾಲಜಿಕಲ್ ಸರ್ವೆ ಆಫ್ ಇಂಡಿಯ, ಮಾನವ ಭವನ, ಮೈಸೂರು.

***ಸಾರಾಂಶ:* (Abstract)**

*ಪ್ರತಿಯೊಂದು ಸಮುದಾಯವು ತಮ್ಮದೇ ಆದ ವೈಶಿಷ್ಟ್ಯ ಪೂರ್ಣ ಧಾರ್ಮಿಕ ಹಿನ್ನೆಲೆಯನ್ನು ಹೊಂದಿದೆ. ಇದರಿಂದಾಗಿ ತನ್ನನ್ನು ಇತರ ಸಮುದಾಯಗಳಿಗಿಂತ ಭಿನ್ನ ಎಂದು ಗುರುತಿಸಿ ಕೊಂಡಿರುತ್ತದೆ. ಜೀವನ ನಿರ್ವಹಣೆಯು ಪ್ರಕೃತಿಯ ಸೆಣಸಾಟದಿಂದ ಕೂಡಿದ ಬುಡಕಟ್ಟು ಸಮುದಾಯದ ಪಟ್ಟಿಯಲ್ಲಿರುವ ಪ್ರತಿಯೊಂದು ಸಮುದಾಯಗಳು ತಮ್ಮದೇ ಆದ ಧಾರ್ಮಿಕ ಭಾವನೆಗಳು ಹೋಲಿಕೆ, ಸಮಾನ ಸಂಪ್ರದಾಯಗಳು, ಸಮಾನ ಚಿಂತನೆ ಮತ್ತು ಸಾಮಾಜಿಕ ಕ್ರಿಯಾಶೀಲ ಚಟುವಟಿಕೆಗಳು ಹೀಗೆ ವ್ಯಕ್ತವಾಗುತ್ತದೆ ಎಂಬುದು ಮುಖ್ಯವಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಡುಂಗ್ರಿ ಗರಾಸಿಯ ಬುಡಕಟ್ಟು ಸಮುದಾಯದ ಧಾರ್ಮಿಕ ಆಚರಣೆಗಳನ್ನು ಕುರಿತು ಅವಲೋಕಿಸಲಾಗಿದೆ.*

***ಮುಖ್ಯಪದಗಳು:* (Keywords)** ಡುಂಗ್ರಿ ಗರಾಸಿಯ, ಸಮುದಾಯ, ಆಚರಣೆಗಳು, ವಿವಾಹ, ಆರಾಧನೆ.

## ಪೀಠಿಕೆ

*ಡುಂಗ್ರಿ ಗರಾಸಿಯ ಸಮುದಾಯವು ಧಾರ್ಮಿಕ ಆಚರಣೆಗಳನ್ನು ಸರಳತೆ ಹಾಗೂ ವಿಭಿನ್ನತೆಯಿಂದ ಕೂಡಿಸಿಕೊಂಡಿದೆ.* ಡುಂಗ್ರಿ ಗರಾಸಿಯ ಸಮುದಾಯದವರು ರಾಜ್ಯದಾದ್ಯಂತ ಆಯಾ ಪ್ರದೇಶಗಳಲ್ಲಿ ಆಯಾ ಕಾಲಕ್ಕನುಗುಣವಾಗಿ ದಸರಾ, ಯುಗಾದಿ ಹಬ್ಬಗಳನ್ನು ಆಚರಿಸುವುದನ್ನು ಕಾಣಬಹುದಾಗಿದೆ. ಅವರು ಆಚರಿಸುವ ಧಾರ್ಮಿಕ ಆಚರಣೆಗಳಲ್ಲಿ ಸಿಹಿ ತಿನಿಸುಗಳ ಜೊತೆಗೆ ಮಾಂಸಾಹಾರವನ್ನು ಈ ಸಮುದಾಯದ ಜನರು ಹೆಚ್ಚು ಬಳಸುತ್ತಾರೆ. ಪ್ರಮುಖವಾಗಿ ಕುರಿ, ಕೋಳಿ, ಮೀನು ಮತ್ತು ಕಾಡು ಪ್ರಾಣಿಗಳ ಮಾಂಸವನ್ನು ಹೆಚ್ಚಾಗಿ ಬಳಸುತ್ತಿರುವುದು ಧಾರ್ಮಿಕ ಆಚರಣೆಯ ವೈಶಿಷ್ಟ್ಯವಾಗಿದೆ.

## ಜನನ

ಮಾನವನ ಜೀವನ ಕ್ರಮದಲ್ಲಿ ಬಹುಮುಖ್ಯವಾಗಿ ಕಂಡು ಬರುವಂತಹ ಧಾರ್ಮಿಕ ಆಚರಣೆಯಾಗಿದೆ. ಅದೇ ರೀತಿಯಲ್ಲಿ ಡುಂಗ್ರಿ ಗರಾಸಿಯ ಬುಡಕಟ್ಟು ಸಮುದಾಯದಲ್ಲಿ ಜನನದ ಬಗೆಗೆ

*Please cite this article as: ಶಿವಲಿಂಗಪ್ಪ. ಎ. ಎನ್. ಮತ್ತು ಡಾ. ಬಿ. ಆರ್. ವಿಜಯೇಂದ್ರ* (2022). ಡುಂಗ್ರಿ ಗರಾಸಿಯ ಬುಡಕಟ್ಟು ಸಮುದಾಯದ ಧಾರ್ಮಿಕ ಆಚರಣೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 92–97.*

ವಿಶೇಷವಾದ ಗಮನಹರಿಸುವುದು ಬಹಳ ಮುಖ್ಯವಾಗುತ್ತದೆ. ಎಲ್ಲಾ ಸಮುದಾಯದಲ್ಲಿರುವಂತೆಯೇ ಈ ಸಮುದಾಯದವರಲ್ಲಿ ಸಾಮಾನ್ಯವಾಗಿ ಗರ್ಭಿಣಿ ಮಹಿಳೆಯರಿಗೆ ಒಂಭತ್ತನೇ ತಿಂಗಳಲ್ಲಿ ಅಂದರೆ ಹೆರಿಗೆ ದಿನಗಳು ಹತ್ತಿರ ಬರುತ್ತಿದ್ದಂತೆ ಆಕೆಯ ಕೈಕಾಲುಗಳು, ತೊಡೆಗಳು, ಸೊಂಟ, ಹೊಟ್ಟೆಯಲ್ಲಿ ನೋವು ಕಂಡುಬರುತ್ತದೆ. ಗರ್ಭಿಣಿ ಹೆರಿಗೆಯ ನೋವು ಕಾಣಿಸಿಕೊಂಡು ಅದು ಹೆಚ್ಚಾದಾಗ ಅವರು ಉಪಚರಿಸುವ ರೀತಿಯನ್ನು ಗಮನಿಸಿದಾಗ ಆ ಸಂದರ್ಭದಲ್ಲಿ ಇವರು ಆ ಗರ್ಭಿಣಿ ಮಹಿಳೆಗೆ ಜೀರಿಗೆ ಕುಟ್ಟಿ ಸ್ವಲ್ಪ ನೀರು ಹಾಕಿ ಅದನ್ನು ಕುದಿಸಿ ಆರಿಸಿ ಒಂದು ಲೋಟದಷ್ಟನ್ನು ಕುಡಿಸುವ ಪದ್ಧತಿಯಿರುವುದು ತಿಳಿದು ಬರುತ್ತದೆ. ಬೇರೆ ಸಮುದಾಯದವರಲ್ಲಿ ಇರುವಂತೆ ಇವರಲ್ಲಿಯೂ ಸಹ ಗಂಡು ಮಗುವು ಜನಿಸಿದರೆ ಸಂತೋಷಪಡುತ್ತಾರೆ. ಮಗು ಜನಿಸಿದ ಬಳಿಕ ಮಗುವಿನ ಹೊಕ್ಕಳು ಬಳ್ಳಿಯನ್ನು ಮನೆಯಲ್ಲಿ ದೊರೆಯುವ ಉಪಕರಣವಾದ ಕುಡಗೋಲು ಅಥವಾ ಬ್ಲೇಡ್‌ನಿಂದ ಬೇರ್ಪಡಿಸುತ್ತಾರೆ. ಆನಂತರ ಮಗುವನ್ನು ತಾಯಿಯ ಬಳಿಯೇ ಮಲಗಿಸುತ್ತಾರೆ.

ಹೆಣ್ಣು ಮಗುವಾದರೆ ಗಂಡು ಮಗುವಾದಷ್ಟು ಸಂತೋಷವನ್ನು ಇವರಲ್ಲಿಯೂ ಸಹ ಗುರುತಿಸಬಹುದು. ಗಂಡು ಅಥವಾ ಹೆಣ್ಣು ಮಗುವಿನ ಜನನವಾದ ಸಂದರ್ಭದಲ್ಲಿ ಇವರು ಅನುಸರಿಸುವ ಪದ್ಧತಿಗಳಲ್ಲಿ ಯುವಕನೊಬ್ಬ ಗುದದ್ವಾರದ ಹೊರಭಾಗದಲ್ಲಿ "ಯಾವುದಾದರೊಂದು ಮೂಲೆಯಲ್ಲಿ ಗುಂಡಿ ತೆಗೆದು ಅದರಲ್ಲಿ ಅಂಬರವನ್ನು ಹಾಕಿ ಅದರ ಮೇಲೆ ಐದು ಕಾಳು ಜೋಳವನ್ನು ಹಾಕಿ ಮಣ್ಣು ಮುಚ್ಚಲಾಗುತ್ತದೆ. ಇದನ್ನು ನ್ಹಾಣಿ ಎಂದು ಕರೆಯುತ್ತಾರೆ ಹಾಗೂ ಅದರ ಮೇಲೆ ಒಂದು ಕಲ್ಲನ್ನು ಇಟ್ಟು ಆ ಕಲ್ಲಿನ ಮೇಲೆಯೇ 12 ದಿನಗಳವರೆಗೆ ತಾಯಿ ಮತ್ತು ಮಗುವನ್ನು ಬಿಸಿ ನೀರಿನಿಂದ ಸ್ನಾನ ಮಾಡಿಸುವುದು. 12 ದಿನಗಳ ನಂತರ ಸ್ವಲ್ಪ ಹುಲ್ಲನ್ನು ತಂದು ನ್ಹಾಣಿಯ ಮೇಲೆ ಸುಡಲಾಗುತ್ತದೆ. ಇದು ಮಗುವಿನ ಜನನದ ಸಂದರ್ಭದಲ್ಲಿ ಈ ಸಮುದಾಯದವರಲ್ಲಿ ಕಂಡು ಬರುವ ಧಾರ್ಮಿಕ ಪದ್ಧತಿಯಾಗಿದೆ.

**ನಾಮಕರಣ**

ನಾಮಕರಣ ಎಂಬುದು ಮಗುವಿಗೆ ಅಕ್ಷರಶಃ ಹೆಸರಿಡುವ ಕ್ರಿಯೆಯಾಗಿದೆ. ಮಗುವಿನ ಜನನದ ನಂತರ ಹನ್ನೊಂದನೇ ದಿನ ಈ ಕಾರ್ಯವನ್ನು ಏರ್ಪಡಿಸಲಾಗುತ್ತದೆ. ಇದು ಒಂದು ಸರಳ ಆಚರಣೆಯಾಗಿರುತ್ತದೆ. ಕೆಲವರು ತಮ್ಮ ಪೂರ್ವಿಕರ ಹೆಸರನ್ನು ಮಕ್ಕಳಿಗೆ ಇಡುತ್ತಾರೆ. ತಮ್ಮ ಕುಲದೇವರು, ಇಷ್ಟದ ದೇವತೆಗಳ ಹೆಸರನ್ನು ಮಕ್ಕಳಿಗೆ ಹೆಸರಿಸುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಭಕ್ತಿ ಪಂಥದ ಚಳುವಳಿಗಳ ಆರಂಭದಲ್ಲಿ ಪ್ರಾರಂಭವಾದ ಈ ಪದ್ಧತಿಯು ಸಾಮಾನ್ಯವಾಗಿ ಜನಪ್ರಿಯವಾಗಿದೆ. ದೇವರುಗಳ ಹೆಸರಿಸುವ ಮೂಲಕ ನಾವು ಮಗುವನ್ನು ಕರೆದರೆ, ದೇವರ ಹೆಸರು ಉಚ್ಚರಿಸುವಂತೆ ಆಗುವುದೆಂದು ಹಲವರು ಈ ಅವಕಾಶವನ್ನು ಪರಿಗಣಿಸಿ ದೇವರ ಹೆಸರಿಡುತ್ತಾರೆ.

ನಾಮಕರಣ, ಸಂಸ್ಕಾರ ಸಾಮಾನ್ಯವಾಗಿ ಜನನದ ನಂತರ ಹತ್ತನೇ ಅಥವಾ ಹನ್ನೆರಡನೆಯ ದಿನ ನಡೆಸಲಾಗುತ್ತದೆ. ನಾಮಕರಣ ಪದ್ಧತಿಯು ಡುಂಗ್ರಿ ಗರಾಸಿಯ ಸಮುದಾಯದವರಲ್ಲಿಯೂ ಕಾಣಬಹುದು. ಅವರಲ್ಲಿ ಈ ಸಂಸ್ಕಾರವನ್ನು ಮಗು ಹುಟ್ಟಿದ ಐದು ದಿನಕ್ಕೆ ನಾಮಕರಣ ಮಾಡುವ ಪದ್ಧತಿಯಿದೆ. ಮಗುವಿನ ಹೆಸರನ್ನು ಆಯ್ಕೆ ಮಾಡುವವರು ಆ ಮನೆಯ ಯಜಮಾನ. ಆ ಸಮುದಾಯದಲ್ಲಿರುವ ಹಿರಿಯರು, ಸಮುದಾಯದ ನಾಯಕ ಇವರಲ್ಲಿ ಯಾರಾದರೂ ಒಬ್ಬರು ಆ ಮಗುವಿನ ಕುಟುಂಬದ ಪೂರ್ವಿಕರ

ಹೆಸರನ್ನು ಸೂಚಿಸುತ್ತಾರೆ. ಆ ಮಗುವಿಗೆ ಅದೇ ಹೆಸರನ್ನು ಇಡಲಾಗುತ್ತದೆ. ಒಬ್ಬರು ಸೂಚಿಸಿದ ಹೆಸರನ್ನು ಅಥವಾ ಒಂದು ಬಾರಿ ಇಟ್ಟ ಹೆಸರನ್ನು ಅವರ ಪದ್ಧತಿ ಅಥವಾ ಸಂಪ್ರದಾಯದಂತೆ ಮತ್ತೆ ಯಾವ ಕಾರಣಕ್ಕೂ ಬದಲಾವಣೆ ಮಾಡುವಂತಿಲ್ಲ.

ಸೂತಕ ತೆಗೆಯುವ ಪದ್ಧತಿಯನ್ನು ಸಹ ಇವರಲ್ಲಿ ಕಾಣಬಹುದು. ಹೆರಿಗೆಯಾದ ನಂತರ ಮಗು ಹುಟ್ಟಿದ ಹನ್ನೊಂದನೇ ದಿನಕ್ಕೆ ಗಂಡು ಮಗುವಿಗೆ ಬಾಲಕ ಸೂತಕವೆಂತಲೂ ಹೆಣ್ಣು ಮಗುವಿಗೆ ಗಾಯಿಮುತ್ತರ್ ಎಂಬುದಾಗಿ ಸೂತಕ ತೆಗೆಯುವುದನ್ನು ಈ ಸಮುದಾಯದವರಲ್ಲಿ ಕಾಣಬಹುದು. ಸೂತಕ ಪದ್ಧತಿಯನ್ನು ಮುಗಿಸುವವರೆಗೂ ಮಗುವನ್ನು ಯಾರೂ ಮುಟ್ಟುವಂತಿಲ್ಲ. ಸೂತಕ ತೆಗೆಯಲು ಒಂದು ಚೊಂಬು ಒಳ್ಳೆಯ ನೀರನ್ನು ಅಥವಾ ಶುದ್ಧವಾದ ನೀರನ್ನು ಮನೆಯ ಯಾರಾದರೊಬ್ಬರು ಮೊದಲು ದೇವರ ಮೇಲೆ ಎರಚಿ, ನಂತರ ಭಕ್ತೆ ಅಥವಾ ಭಗತ್‌ನ ಮೇಲೆ ಎರಚಿ ಅನಂತರ ಸಮುದಾಯದ ಎಲ್ಲಾ ಮನೆಗಳ ಮೇಲೆ ಎರಚಿದ ನಂತರ ಮಗುವಿನ ಸೂತಕ ಕಳೆಯುತ್ತದೆ. ಅನಂತರ ಮಗುವನ್ನು ಯಾರಾದರೂ ಎತ್ತಿಕೊಳ್ಳುವಂತಹ ಪದ್ಧತಿಯನ್ನು ಇವರಲ್ಲಿ ನೋಡಬಹುದು.

**ಋತುಮತಿ**

ಡುಂಗ್ರಿ ಗರಾಸಿಯರಲ್ಲಿ ಹೆಣ್ಣು ಋತುಮತಿಯಾದಾಗ ಅನುಸರಿಸುವ ಪದ್ಧತಿಗಳು ಈ ರೀತಿಯಾಗಿದೆ. ಮೊದಲು ಮುಟ್ಟು ಆದಾಗ 7 ರಿಂದ 10 ದಿನಗಳು ಆಕೆಗೆ ಪ್ರತ್ಯೇಕವಾದ ಒಂದು ತಟ್ಟೆ ಲೋಟ ಹಾಸಿಗೆ ಬಟ್ಟೆಗಳನ್ನು ಕೊಡಲಾಗುತ್ತದೆ. ಅವರನ್ನು ಯಾರೂ ಕೂಡ ಮುಟ್ಟಬಾರದು ಮತ್ತು ಅವಳು ಕೂಡ ಯಾರನ್ನು ಮುಟ್ಟಬಾರದು. 7 ರಿಂದ 10 ದಿನಗಳ ತರುವಾಯ ವಸ್ತ್ರಾಲಂಕಾರವನ್ನು ಮಾಡಿ ಅವಳ ಮಡಿಲು ತುಂಬಿಸುವ ಕಾರ್ಯ ಮಾಡಲಾಗುವುದು. ಮಡಿಲಿಗೆ ಒಳ್ಳೆ, ಪುರಿಕಡ್ಲೆ, ಕೊಬ್ಬರಿಯನ್ನು ತುಂಬಿಸಲಾಗುತ್ತದೆ. ಅದನ್ನು ಅವಳು ತನ್ನ ಸಂಬಂಧಿಕರಿಗೆಲ್ಲಾ ಹಂಚುತ್ತಾಳೆ. ಇದಕ್ಕೆ "ಮಡಿಲು ತುಂಬಿಸುವುದು" ಎಂದು ಹೇಳಲಾಗುತ್ತದೆ.

**ವಿವಾಹ**

ಭಾರತೀಯ ಸಮಾಜದಲ್ಲಿ ಮಾನವನ ಜೀವನದಲ್ಲಿ ವಿವಾಹವು ಅತ್ಯಂತ ಮಹತ್ವದ ಘಟ್ಟವಾಗಿರುತ್ತದೆ. ಹಾಗೆಯೇ ತನ್ನ ವಂಶಾಭಿವೃದ್ಧಿಯನ್ನು ಮುಂದುವರೆಸಿಕೊಂಡು ಬರಲು ಈ ವಿವಾಹದ ಮೂಲಕ ಸಮಾಜವು ಅನುಮತಿಸುತ್ತದೆ. ಗಂಡು ಮತ್ತು ಹೆಣ್ಣಿನ ಜೀವನದಲ್ಲಿ "ವಿವಾಹ" ಎನ್ನುವುದು ಗುರುತಿಸುವಿಕೆಯ ಏಕಮಾತ್ರ ಮಹತ್ವದ ಉದ್ದೇಶವಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಪಷ್ಟವಾಗುವ ಸಾಮಾಜಿಕ ಸತ್ಯವೆಂದರೆ ಆದಿವಾಸಿ ಸಮುದಾಯದವರ ದಾಸ್ಯವು ಸಾಮಾಜಿಕ, ಆರ್ಥಿಕ ತಳಹದಿಯ ಮೇಲೆ ನಿರ್ಮಾಣಗೊಂಡಿರುವುದು ಪ್ರಬಲ ಸಮುದಾಯಗಳ ನಡುವೆ ಬಲಹೀನ ಸಮುದಾಯವು ಪ್ರಧಾನ ಯಜಮಾನ್ಯ. ಕುಟುಂಬದ ಭೂಮಿಕೆಯಾದಾಗ ಲೈಂಗಿಕ ಹಕ್ಕು ಮತ್ತು ಮಗುವಿನ ತಂದೆಯನ್ನು ಗುರುತಿಸುವ ಆ ಮೂಲಕ ತಾಯಿ–ತಂದೆ, ಮಕ್ಕಳು ಎಂಬ ರಕ್ತ ಸಂಬಂಧಿ ಬಾಂಧವ್ಯ ಬಲಯುತವಾಗಿ ಕುಟುಂಬ ಕಲ್ಪನೆಗೆ ಭದ್ರವಾದ ಬುನಾದಿ ನೀಡಿವೆ ಇದರ ರಕ್ಷಣಾತ್ಮಕ ಸೂತ್ರವಾಗಿ "ವಿವಾಹ" ಸಂಗ್ರಹಿತವಾಗಿದೆ.

ವೈವಾಹಿಕ ಬಾಂಧವ್ಯ ಎಂಬುದು ಶಬ್ದವೇ ಹೇಳುವಂತೆ ರಕ್ತ ಬಾಂಧವ್ಯದಂತೆ ಹುಟ್ಟು ಬಾಂಧವ್ಯವಲ್ಲ. ಕಟ್ಟು ಬಾಂಧವ್ಯ ವಿವಾಹದ ಮೂಲಕ ಹೊಸದಾಗಿ ಸೃಷ್ಟಿಸಿಗೊಂಡಂತಹದು. ಇದರಲ್ಲಿ ಗಂಡ, ಹೆಂಡತಿ, ಅತ್ತೆ, ಮಾವ, ಸೊಸೆ, ನಾದಿನಿ, ಅತ್ತಿಗೆ, ಮೈದುನ, ಇತ್ಯಾದಿಗಳ ಬಾಂಧವ್ಯಗಳು ಕಂಡು ಬರುತ್ತವೆ. ವಿವಾಹವು ಕಾನೂನು ಅಥವಾ ಸಂಪ್ರದಾಯದಿಂದ ಅಂಗೀಕರಿಸಲಾದ ಒಕ್ಕೂಟ ಬೇರೆ ಬೇರೆ ಧರ್ಮ ಮತ್ತು ಪಂಗಡಗಳಲ್ಲಿ ರೂಢಿಯಲ್ಲಿ ಪ್ರಕಟವಾಗುವ ವಿವಾಹವಾಗುವ ಸಂದರ್ಭಗಳಲ್ಲಿ ಅನೇಕ ವಿಧಿ ಮತ್ತು ಆಚರಣೆಗಳನ್ನು ಅನುಸರಿಸಲಾಗುತ್ತದೆ. ಇಂತಹ ಸಂಬಂಧಿತ ಬಾಂಧವ್ಯ ಸಮಾಜದಲ್ಲಿ ನೈತಿಕವಾಗಿ ಬದುಕುವ ಅನಿವಾರ್ಯ ನೆಲೆಗಳು ವಿವಾಹದ ಮೂಲದಿಂದಲೇ ಏರ್ಪಡುತ್ತದೆ.

**ಆರಾಧನೆ**

ಪ್ರತಿಯೊಂದು ಸಮುದಾಯವು ತನ್ನ ಇಷ್ಟವಾದ ದೈವ, ಭೂತ ಮತ್ತು ನೈಸರ್ಗಿಕ ವಸ್ತುಗಳ ಮೇಲೆ ಹೊಂದಿರುವಂತಹ ವಿಶೇಷತೆಯನ್ನು ಆರಾಧನೆಗಳಲ್ಲಿ ಕಂಡುಕೊಳ್ಳುವುದಾಗಿದೆ. ನಾಡಿನ ಇತರ ಭಾಗಗಳಲ್ಲಿ ದೇವರು ಹಾಗೂ ದೈವ ಎಂಬುದು ಬಹುಮಟ್ಟಿಗೆ ವಾಕಾರ್ಥದಲ್ಲಿ ಬಳಕೆಯಾದರೂ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳ ಭಾಗದಲ್ಲಿ ಅವು ಎರಡು ವಿಭಿನ್ನ ಪರಿಕಲ್ಪನೆಗಳಾಗಿಯೇ ಬಳಕೆಯಲ್ಲಿವೆ. ಅವರ ಪ್ರಕಾರ ದೈವ ಎಂಬುದು ಸಾಮಾನ್ಯವಾಗಿ ದೇವರಿನ ಸ್ಥಾನದ ನಂತರದಲ್ಲಿ ಆರಾಧನಾ ಶಕ್ತಿಯಾಗಿ ಕಾಣಲಾಗುತ್ತದೆ.

ಆರಾಧನೆಗಳಲ್ಲಿ ಪ್ರಮುಖವಾಗಿ ದೇವರನ್ನು ಕುರಿತಾದ ಆರಾಧನೆಗಳನ್ನು ಹಾಗೂ ದೈವಕ್ಕೆ ಸಂಬಂಧಿಸಿದ ಆರಾಧನೆಗಳನ್ನು ಆಚರಣೆ ಮಾಡಲಾಗುತ್ತದೆ. ದೈವವನ್ನು ಭೂತವೆಂದು ಹೇಳಲಾಗುತ್ತದೆ. ಹಲವು ಬುಡಕಟ್ಟು ಸಂಪ್ರದಾಯಗಳು ಭೂತರಾಧನೆಯನ್ನು ಒಂದಲ್ಲಾ ಒಂದು ರೀತಿಯಲ್ಲಿ ಆಚರಿಸಿಕೊಂಡು ಬಂದಿರುತ್ತಾರೆ. ಇವರ ನಂಬಿಕೆಯ ಪ್ರಪಂಚದಲ್ಲಿ ಭೂತಗಳೆಂದರೆ ಇತರೆ ಪ್ರದೇಶಗಳಲ್ಲಿರುವವರು ಸಾಮಾನ್ಯವಾಗಿ ಅರ್ಥೈಸುವಂತದ್ದು. "ದೆವ್ವ" ಅಥವಾ "ಪಿಶಾಚಿ" ಎಂಬರ್ಥದಲ್ಲಿ "ದೈವ"ಗಳು ಅಥವಾ "ಸತ್ಯ"ಗಳು ಎಂಬುದಾಗಿಯೇ ಅವು ತಿಳಿಯಲ್ಪಟ್ಟಿರುತ್ತದೆ.

ಡುಂಗ್ರಿ ಗರಾಸಿಯ ಬುಡಕಟ್ಟು ಸಮುದಾಯದಲ್ಲಿ, ದೇವರನ್ನು ಆರಾಧಿಸುತ್ತಾರೆ. ದೇವರಿಗೆ ಎಲ್ಲಾ ಆ ಕಾರ್ಯಗಳಲ್ಲೂ ಮೊದಲ ಆದ್ಯತೆಯನ್ನು ನೀಡಲಾಗುತ್ತದೆ. ಇವರು ನೆಲೆಸಿರುವ ಪ್ರತಿ ಗುಂಪಿನಿಂದ ಒಂದಿಬ್ಬರು ಭಕ್ತರು ಸೇರಿರುತ್ತಾರೆ. ಸಾಮಾನ್ಯವಾಗಿ ಯಾರ ಮನೆಯಲ್ಲಿ ದೇವರು ಪ್ರತಿಷ್ಠಾಪನೆ ಆಗಿರುತ್ತದೆಯೋ ಅವರ ಮನೆಯಲ್ಲಿಯೇ ಈ ಭಕ್ತರನ್ನು ಕಾಣಲಾಗುತ್ತದೆ. ಸಾಂಪ್ರದಾಯಿಕವಾಗಿ ಈ ಸಮುದಾಯದವರ ಒಂದು ಮನೆಯಲ್ಲಿ ಅವರ ಹಿರಿಯರ ಕಾಲದಿಂದಲೂ ದೇವರ ಮೂರ್ತಿಗಳನ್ನು ರಕ್ಷಿಸಿಕೊಂಡು ಬರಲಾಗುತ್ತದೆ. ಅದನ್ನು ಉಳಿಸಿ ರಕ್ಷಿಸಿಕೊಂಡು ಬರುವುದು. ಇನ್ನುಳಿದವರ ಜವಾಬ್ದಾರಿಯು ಕೂಡ ಆಗಿರುತ್ತದೆ.  ಇದು ಯಾರ ಮನೆಯಲ್ಲಿರುತ್ತದೆಯೋ ಅವರು ಅಥವಾ ಭಗತ್ ಆದವರು ಅವರದೇ ಆದ ಕೆಲವು ರೀತಿ–ನೀತಿಗಳನ್ನು ಪಾಲಿಸಬೇಕಾಗಿರುತ್ತದೆ. ಭಗತ್ ಆದವರು ತಮಗೆ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವಂತಿಲ್ಲ. ಅಂತಹವರ ತಲೆಯ ಮೇಲೆ ಎಂದೂ ಚಪ್ಪಲಿಯನ್ನು ತಾಗಿಸುವುದು ಅಪಚಾರವಾಗುತ್ತದೆ. ಅಂತಹ ಅಪಚಾರವಾಗುವಂತಹ ಯಾವುದೇ ರೀತಿಯಲ್ಲಿ ನಿಯಮಗಳನ್ನು

ಮಾಡುವಂತಿಲ್ಲ. ಇದೇ ರೀತಿಯ ಕೆಲವು ನೀತಿ–ನಿಯಮಗಳನ್ನು ಈ ಸಮುದಾಯದವರೆಲ್ಲ ಪಾಲಿಸಿಕೊಂಡು ಬಂದಿರುವುದನ್ನು ಇಲ್ಲಿ ಕಾಣಬಹುದಾಗಿದೆ.

**ಆಚರಣೆ**

ಮಾನವನು ಹುಟ್ಟಿನಿಂದ ಸಾಯುವವರೆಗೆ ಒಂದಲ್ಲ ಒಂದು ಆಚರಣೆಗಳನ್ನು ವಿಧಿ–ವಿಧಾನಗಳನ್ನು ತಾನು ನಂಬಿ ಬದುಕುವ ಸಾಂಸಾರಿಕ ಜೀವನದ ವ್ಯವಸ್ಥೆಯ ಸುರಕ್ಷತೆಗಾಗಿ ಆಚರಣೆಗಳನ್ನು ಮಾಡಿಕೊಂಡು ಬರಬೇಕಾಗುತ್ತದೆ. ವೈಯಕ್ತಿಕವಾಗಿ ಅಥವಾ ಇಡೀ ಸಮುದಾಯವನ್ನು ಕಾಯುವ ದೈವಗಳ ಸಂತೃಪ್ತಿಗಾಗಿ ಜನನ ಮರಣ, ವಿವಾಹ ಮುಂತಾದವುಗಳ ಸಂದರ್ಭಗಳಲ್ಲಿ ವಿವಿಧ ಆಚರಣೆಗಳನ್ನು ಆಚರಿಸಲಾಗುತ್ತಿದೆ. ಪ್ರತಿಯೊಂದು ಸಮುದಾಯವು ತನ್ನದೇ ಆದ ಕುಲದೈವಗಳನ್ನು ಆರಾಧ್ಯ ದೈವಗಳನ್ನು ಭೂತ ಆರಾಧನೆಗಳನ್ನು ಹೊಂದಲಾಗಿರುತ್ತದೆ. ಈ ದೈವಗಳಣ್ನು ಒಲಿಸಿಕೊಳ್ಳಲು ನಿರ್ದಿಷ್ಟವಾದ ಆಚರಣೆ ಸಂಪ್ರದಾಯಗಳನ್ನು ಪರಂಪರಾನುಗತವಾಗಿ ತಮ್ಮದೇ ಆದ ಕ್ರಮದಲ್ಲಿ ಆರಾಧಿಸುತ್ತಾ ಬಂದಿರುತ್ತಾರೆ. ಅವರು ಆರಾಧಿಸುತ್ತಿರುವ ದೈವಗಳನ್ನು ಕುರಿತು ಅನೇಕ ನಂಬಿಕೆ, ಸಂಪ್ರದಾಯ ಆಚರಣೆ ಹಬ್ಬಗಳು, ವಿಧಿ–ನಿಷೇಧಗಳು ಸೇರಿರುತ್ತವೆ.

ಪ್ರಪಂಚದಲ್ಲಿರುವ ಎಲ್ಲಾ ಸಮುದಾಯಗಳು ದೇವರನ್ನು ಒಲಿಸಿಕೊಳ್ಳುವುದಕ್ಕಾಗಿ ದೈವಕ್ಕೆ ಸಂಬಂಧಿಸಿದ ಹಬ್ಬಗಳನ್ನು ಆಚರಿಸಿಕೊಂಡು ಬರುತ್ತಿರುವುದನ್ನು ಕಾಣುತ್ತೇವೆ. ಆಚರಣೆಗಳಲ್ಲಿ ಪ್ರಮುಖವಾಗಿ ಮಾನವ ತನ್ನ ದಿನನಿತ್ಯದ ಜೀವನ ಆರಂಭದಿಂದ ಹಿಡಿದು ತನ್ನ ವೈಯಕ್ತಿಕ ಹಾಗೂ ಸಮುದಾಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಅನೇಕ ಆಚರಣೆಗಳನ್ನು ನಡೆಸಿಕೊಂಡು ಬರಲಾಗುತ್ತದೆ. ಅದರಂತೆ ಡುಂಗ್ರಿ ಗರಾಸಿಯ ಬುಡಕಟ್ಟು ಸಮುದಾಯದವರಲ್ಲಿಯೂ ಸಹ ಹಲವು ಆಚರಣೆಗಳಿರುವುದನ್ನು ಕಾಣಬಹುದು.

ಸಮುದಾಯವನ್ನು ಒಳಗೊಂಡಂತೆ ತನ್ನ ಮನೆಗೆ ಮತ್ತು ಮನೆಯವರು ಹಿತಕ್ಕಾಗಿ ದೇವರು, ದೈವ ಮತ್ತು ಇತರೆ ಆಚರಣೆಗಳು ಪ್ರಮುಖವಾಗಿರುವುದನ್ನು ಇಲ್ಲಿ ಗಮನಿಸಬಹುದು. ಅವುಗಳಲ್ಲಿ ಪ್ರಮುಖವಾಗಿ ಹಬ್ಬಗಳು, ಧಾರ್ಮಿಕ ವಿಧಿವಿಧಾನಗಳು, ಬಲಿಪೂಜೆ, ಹಿರಿಯರ ಹೆಸರಿನಲ್ಲಿ ಎಡೆ ಇಡುವ ಪದ್ಧತಿ, ಜುಂವಾ, ಪಡಿಯಾರ್, ಹಾಡ್ರ, ಪಡಿಯಾರ್‌ರವರ ಭೇಡಾ ವಿದಾನ, ನೈವೇದ್ಯ, ದಸರಾ ಪೂಜೆ, ಸಿತಾಳ ಪೂಜೆ, ದೈವದ ಪಶುಗಳ ಪೂಜೆ, ಹಿರಿಯರ ಪೂಜೆ, ಮಾಟಮಂತ್ರ ಮತ್ತು ಜನಪದ ನಂಬಿಕೆಗಳು ಸಹ ಆಚರಣೆಗಳು ಇವರಲ್ಲಿ ಪರಿಪಾಲನೆಗೊಳಪಟ್ಟಿವೆ.

**ಹಬ್ಬಗಳು**

ಹಬ್ಬ ಎನ್ನುವ ಶಬ್ದ ಸಂಸ್ಕೃತದ ಸಮನ್ ಪದದ ತದ್ಭವ ಪದವಾಗಿದೆ. ಪರ್ವ ಎಂದರೆ ಇನ್ನೊಂದರ ಜೊತೆಯಲ್ಲಿ ಸಂಧಿಸುವುದು ಎಂದು ಅರ್ಥ. ಸಂಪ್ರದಾಯಗಳು ಮತ್ತು ಆಚರಣೆಗಳು ಹಬ್ಬಗಳಿಗೆ ಪ್ರೇರಕಗಳಾಗಿವೆ. ಸಂಪ್ರದಾಯಗಳ ನೆಲೆಯಲ್ಲಿ ಪೂಜೆಯ ಜನರ ಸಾಮಾಜಿಕ ಚಲನಶೀಲತೆಯ ಒಂದು ಹಬ್ಬವಾಗಿದೆ ಮತ್ತು ಜೀವಂತಿಕೆಯನ್ನು ವಿಶೇಷವಾದ ಆಚರಣೆಗಳ ಮೂಲಕ ಹಬ್ಬಗಳಲ್ಲಿ ಕಂಡುಕೊಳ್ಳುವುದನ್ನು ಮಾನವ ಕಂಡುಕೊಂಡಿದ್ದಾನೆ.

ಹಬ್ಬಗಳು ಕೇವಲ ಸಂತೋಷದಿಂದ ಆಚರಿಸಬೇಕಾದ ಕ್ಷಣಗಳಲ್ಲಿ ಅವು ಮಾನವನ ಅಸ್ತಿತ್ವದ ಬಗ್ಗೆ ಪ್ರತಿಬಿಂಬಿಸಬೇಕಾದ ಸಂದರ್ಭಗಳಾಗಿವೆ. ಅವರವರ ಜೀವನಕ್ಕೆ ಕೊಡುಗೆ ನೀಡಿದ ಎಲ್ಲರನ್ನೂ ಸ್ಮರಿಸಿಕೊಳ್ಳಲು ಅವರಿಗೆ ಕೃತಜ್ಞರಾಗಿರಲು ಹಬ್ಬಗಳನ್ನು ಆಚರಣೆ ಮಾಡಲಾಗುತ್ತದೆ. ಹಬ್ಬಗಳು ಕೇವಲ ಆಚರಣೆಗೆ ಸೀಮಿತವಾಗಿರದೆ ಅನೇಕ ಜನರಿಗೆ ಸಹಾಯ ಮಾಡುವ ಸಮಾಜಕ್ಕೆ ಆಚರಣೆ, ಆರಾಧನೆ, ನಂಬಿಕೆಗಳನ್ನು ಬಿಂಬಿಸುವುದಾಗಿರುತ್ತದೆ. ಹಬ್ಬಗಳು ಉಲ್ಲಾಸ ಮತ್ತು ಸಂಭ್ರಮವನ್ನು ಸೂಚಿಸುವ ಅಭಿವ್ಯಕ್ತಿಯ ಸಂಕೇತಗಳಾಗಿವೆ. ಈ ಹಿನ್ನೆಲೆಯಲ್ಲಿ ಹಬ್ಬಗಳು ಡುಂಗ್ರಿ ಗರಾಸಿಯ ಸಮುದಾಯದವರಲ್ಲಿ ಹೇಗೆ ಆಚರಣೆಗೆ ಒಳಗಾಗುತ್ತವೆ ಎನ್ನುವುದನ್ನು ಇಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ.

**ಉಪಸಂಹಾರ**

ಹಬ್ಬಗಳನ್ನು ಡುಂಗ್ರಿ ಗರಾಸಿಯ ಸಮುದಾಯದವರು ಧಾರ್ಮಿಕ ಮತ್ತು ಕಾಲೋಚಿತವಾಗಿ ವಿಭಜಿಸಿರುವುದನ್ನು ಕಾಣಬಹುದು. ಅವು ಪರಸ್ಪರ ಹೇಗೆ ಭಿನ್ನವಾಗಿದೆ ಎಂಬುದನ್ನು ಗಮನಿಸಿದಾಗ ಸಾಮಾನ್ಯವಾಗಿ ಹಬ್ಬಗಳನ್ನು ಪ್ರತಿಷ್ಠಿತ ಜನರು ಮತ್ತು ಘಟನೆಗಳ ಗೌರವಾರ್ಥವಾಗಿ ಆಚರಿಸಲಾಗುತ್ತದೆ. ಧಾರ್ಮಿಕ ಹಬ್ಬಗಳು ಭಾರತದಾದ್ಯಂತ ಮಾತ್ರವಲ್ಲದೆ ಪ್ರಪಂಚದಾದ್ಯಂತ ಅತ್ಯಂತ ಪ್ರಸಿದ್ಧವಾಗಿದೆ. ಅಂತಹ ಧಾರ್ಮಿಕ ಹಬ್ಬಗಳೆಂದರೆ ದೀಪಾವಳಿ, ಯುಗಾದಿ, ಗುರುನಾನಕ್ ಜಯಂತಿ, ಹೋಳಿ, ಬುದ್ಧ ಜಯಂತಿ, ಕ್ರಿಸ್‌ಮಸ್ ಮತ್ತು ರಂಜಾನ್, ಬಕ್ರೀದ್, ಮುಂತಾದ ಹಬ್ಬಗಳು ಧರ್ಮವನ್ನಾಧರಿಸಿ ಆಚರಣೆ ಮಾಡಲಾಗುತ್ತದೆ. ಆದರೆ ಡುಂಗ್ರಿ ಗರಾಸಿಯ ಸಮುದಾಯದವರು ವರ್ಷದಲ್ಲಿ ಮೂರು ಹಬ್ಬಗಳು ಮುಖ್ಯವಾಗಿದ್ದು, ಅವುಗಳಲ್ಲಿ ಹೋಳಿ, ದಸರಾ ಮತ್ತು ದೀಪಾವಳಿ ಒಂದೊಂದು ರೀತಿಯಲ್ಲಿ ಆಚರಿಸುವುದು ವಿಶೇಷತೆಯಿಂದ ಕೂಡಿರುತ್ತದೆ.

**ಪರಾಮರ್ಶನ ಗ್ರಂಥಗಳು**


- ಜಗದೀಶ್. ಕೆ.ಕೆ. (2008). ಡುಂಗ್ರಿ ಗರಾಸಿಯ ಸಮುದಾಯ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ. ಡುಂಗ್ರಿ ಗರಾಸಿಯ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- Patel.A.M. (1998). Amjrgashna Pattana, Adivasi Garasiya in Samajika Arthika First Edition. Pp. 19, 20,21.
- Singh.K.S. (2003). People of India. Gujarat State Vol.XXII, Papulation Prakashan Pvt., Ltd., Mumbai. Pp.222-225.
- Thuston, E. (1909). Caste and Tribes of Southern India, Madras Govt. Press, Madras.